# ದಾಳಿ

ಮಾನವ ಸಾಗಾಣಿಕೆ ನಿಷೇಧ ತಂತ್ರಗಳೇ ಹೇಗೆ
ಲೈಂಗಿಕ ಕಾರ್ಯಕರ್ತೆಯರ ಸುರಕ್ಷತೆಗೆ
ಮಾರಕವಾಗಿದೆ ಮತ್ತು ಅವರ ಶೋಷಣೆಗೆ
ಕಾರಣವಾಗಿದೆ ಎಂಬುದರ ಅಧ್ಯಯನ.



**ಸಾರಾಂಶ:**

ವೇಶ್ಯಾವಾಟಿಕೆ, ಹಿಂಸಾಚಾರ, ಮಹಿಳೆಯರ ಗುಲಾಮತನದ ಚರ್ಚೆಗಳು ಮತ್ತು ಮಕ್ಕಳ ಮೇಲಿನ ಲೈಂಗಿಕ ಶೋಷಣೆಗಳು ಸಾಕಷ್ಟು ಸಂದರ್ಭಗಳಲ್ಲಿ ಮಾನವ ಕಳ್ಳಸಾಗಾಣಿಕೆ ನಿಷೇಧ ತಂತ್ರಗಳ ಚರ್ಚೆಯನ್ನು ಹಿನ್ನೆಲೆಗೆ ಸರಿಸಿದೆ. ಮಾನವ ಕಳ್ಳಸಾಗಾಣಿಕೆ ನಿಷೇಧದ ಉಪಕ್ರಮಗಳು ಮಾನವ ಕಳ್ಳಸಾಗಾಣಿಕೆ ಹಾಗೂ ವೇಶ್ಯಾವಾಟಿಕೆಗಳ ಅರ್ಥೈಸುವಿಕೆಯಲ್ಲಿ ಗೊಂದಲ ಮೂಡಿಸುತ್ತದೆ ಮತ್ತು ವೇಶ್ಯಾವಾಟಿಕೆ ಎಂಬುದೇ ಹಿಂಸಾಚಾರ ಎಂಬ ತೀರ್ಮಾನಕ್ಕೆ ಬರಲು ಕಾರಣವಾಗುತ್ತದೆ. ತತ್ಪರಿಣಾಮವಾಗಿ ಲೈಂಗಿಕ ಕಾರ್ಯಕರ್ತೆಯರ ಹಾಗೂ ಮಾನವ ಕಳ್ಳಸಾಗಾಣಿಕೆಗೆ ಈಡಾದ ವ್ಯಕ್ತಿಗಳ ಮಾನವ ಹಕ್ಕುಗಳ ಉಲ್ಲಂಘನೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ.

ಇದು ಮಾನವ ಕಳ್ಳಸಾಗಾಣಿಕೆ ವಿರುದ್ಧ ಕ್ರಿಯಾಶೀಲವಾಗಿರುವ ಸಂಘಟನೆಗಳ ಹಾಗೂ ಲೈಂಗಿಕ ಕಾರ್ಯಕರ್ತರ ಹಕ್ಕುಗಳ ಪರ ಹೋರಾಡುವ ಸಂಘಟನೆಗಳ ನಡುವಿನ ಬಿರುಕಿಗೆ ಕಾರಣವಾಗಿದೆ. ಈ ಬಿರುಕಿನ ಪರಿಣಾಮವಾಗಿ ಲೈಂಗಿಕ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿರುವ ಮಹಿಳೆಯರ ಹಕ್ಕುಗಳ ರಕ್ಷಣೆ ಮಾಡುವ ಬದಲಾಗಿ ಲೈಂಗಿಕ ವೃತ್ತಿಯನ್ನೇ ನಿಷೇಧಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪುಗೊಳ್ಳುತ್ತಿದೆ. ಮಾನವ ಕಳ್ಳಸಾಗಾಣಿಕೆ ನಿಷೇಧದ ಚರ್ಚೆ ವಲಸಿಗರಾದ ಲಕ್ಷಾಂತರ ಮಹಿಳೆಯರ ಧ್ವನಿಯನ್ನೂ ಸಹ ವ್ಯವಸ್ಥಿತವಾಗಿ ಹತ್ತಿಕ್ಕುತ್ತಿದೆ. ನೈತಿಕತೆ ಹಾಗೂ ಸಂಸ್ಕೃತಿಯ ಕುರಿತಾದ ಸೀಮಿತ ದೃಷ್ಟಿಯ ಚರ್ಚೆಗಳು ಸುರಕ್ಷಿತ ವಲಸೆ ಹಾಗೂ ಜೀವನೋಪಾಯದ ಆಯ್ಕೆಯ ಹಕ್ಕುಗಳಿಗೂ ಅಡಚಣೆ ಮಾಡುತ್ತಿದೆ.

ಹಾಲಿ ಸಂಶೋಧನೆಯು ದಾಳಿಗೆ, ಸಂರಕ್ಷಣೆಗೆ ಹಾಗೂ ಪುನರ್ವಸತಿಗೆ ಒಳಗಾದ ಲೈಂಗಿಕ ಕಾರ್ಯಕರ್ತೆಯರ ಅನುಭವಗಳನ್ನು ಮುನ್ನೆಲೆಗೆ ತರುವ ಪ್ರಯತ್ನವಾಗಿದೆ. ಮಾನವ ಕಳ್ಳಸಾಗಾಣಿಕೆಯ ವಿರುದ್ಧ ಹೋರಾಡುವ ಮೂಲಕ ಲೈಂಗಿಕ ಕೆಲಸಗಳಿಗೆ ತಳ್ಳಲ್ಪಟ್ಟ ಮಹಿಳೆಯರ ಮೇಲಿನ ದಾಳಿ, ಅವರ ಸಂರಕ್ಷಣೆ ಹಾಗೂ ಪುನರ್ವಸತಿಯ ಪರಿಮಾಣಾತ್ಮಕ ದತ್ತಾಂಶಗಳನ್ನು ಕ್ರೋಢೀಕರಿಸುವುದರ ಜೊತೆಗೆ ಮಹಿಳೆಯರ ಅಭಿಪ್ರಾಯಗಳನ್ನು ಪರಿಶೀಲಿಸುವುದಾಗಿದೆ. ಪ್ರಸ್ತುತ ಅಧ್ಯಯನವು ಲೈಂಗಿಕ ಕಾರ್ಯಕರ್ತರ ಜೀವನದ ಮೇಲೆ ಕಾನೂನು ಹಾಗೂ ಪಾಲಿಸಿಗಳು ಉಂಟು ಮಾಡುವ ಪರಿಣಾಮವನ್ನು ನಿರೂಪಿಸುತ್ತದೆ. ವಿವಿಧ ಕಾಲಘಟ್ಟಗಳಲ್ಲಿ ದಾಳಿಗಳಲ್ಲಿ ಸಂರಕ್ಷಿಸಿ, ಪುನರ್ವಸತಿ ಕಲ್ಪಿಸಲಾದ, ಆದರೆ ಪುನಃ ಲೈಂಗಿಕ ಕೆಲಸಗಳಿಗೆ ಹಿಂದಿರುಗಿದ ಮಹಿಳೆಯರ ಅನುಭವದ ಸುತ್ತ ಹಾಲಿ ಅಧ್ಯಯನ ಪರಿಶೀಲನೆ ನಡೆಸುತ್ತದೆ. ಈ ಸಂಕೀರ್ಣಮಯವಾದ ನಿರೂಪಣೆಯು ಮಾನವ ಕಳ್ಳಸಾಗಾಣಿಕೆ ಹಾಗೂ ಲೈಂಗಿಕ ಕೆಲಸವನ್ನು ಮುಂದುವರಿಸುವ ನಿರ್ಧಾರದ ಜಟಿಲ ಸಂಬಂಧವನ್ನು ತೋರಿಸುತ್ತದೆ.

**ಸಂದರ್ಭ**

ಭಾರತವು ಪ್ರಮುಖ ಮಾನವ ಹಕ್ಕುಗಳ ಒಪ್ಪಂದಗಳು, ಶಿಷ್ಟಾಚಾರಗಳು ಹಾಗೂ ಕಾಲಕಾಲಕ್ಕೆ ಅದರ ಅನುಷ್ಠಾನದ ಸ್ಥಿತಿಗತಿಗಳನ್ನು ವರದಿ ಮಾಡುವ ಪ್ರಮುಖ ದೇಶವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಲೈಂಗಿಕ ಕೆಲಸದ ವಿಷಯದಲ್ಲಿ ದೇಶದೊಳಗೆ ಮಾನವ ಹಕ್ಕುಗಳ ರೂಪುರೇಷೆ ನಿರ್ಮಿಸುವ ಹಾಗೂ ಅದನ್ನು ಸಬಲಗೊಳಿಸುವ ನಿಟ್ಟಿನಲ್ಲಿ ಲೈಂಗಿಕ ಕಾರ್ಯಕರ್ತರು ಹಾಗೂ ಚಳವಳಿಗಾರರು ಕ್ರಿಯಾಶೀಲರಾಗಿದ್ದಾರೆ. ಇತ್ತೀಚೆಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಗುತ್ತಿರುವ ಹಕ್ಕುಗಳ ಕುರಿತಾದ ಚರ್ಚೆಗಳು ಲೈಂಗಿಕ ಕಾರ್ಯಕರ್ತರನ್ನು ಸಂವಿಧಾನದ ಅಡಿಯಲ್ಲಿ ನಾಗರಿಕರಾಗಿ ಪರಿಗಣಿಸಿ ಅವರ ಹಕ್ಕುಗಳನ್ನು ಗೌರವಿಸುವ, ರಕ್ಷಿಸುವ ಹಾಗೂ ಆ ಹಕ್ಕುಗಳನ್ನು ಪೂರ್ಣಗೊಳಿಸುವ ಚೌಕಟ್ಟಿನಲ್ಲಿ ಬೆಳೆಯುತ್ತಿವೆ. ಆದಾಗ್ಯೂ ಭಾರತವು ದೇಶದೊಳಗೆ ಆಗುತ್ತಿರುವ ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ನಿರ್ಲಕ್ಷ್ಯವನ್ನು ಗುರುತಿಸುವಲ್ಲಿ ವಿಫಲವಾಗಿದೆ. ಭಾರತದ ಮಾನವ ಕಳ್ಳಸಾಗಾಣಿಕೆ ನಿಷೇಧ ಕಾಯಿದೆಗಳು, ನಿರ್ದಿಷ್ಟವಾಗಿ

ಅನೈತಿಕ ಮಾನವ ಕಳ್ಳಸಾಗಾಣಿಕೆ (ನಿಷೇಧ) ಕಾಯಿದೆ 1956 (ಐಟಿಪಿಎ), ಮಾನವ ಕಳ್ಳಸಾಗಾಣಿಕೆ ಹಾಗೂ ಲೈಂಗಿಕೆ ಕೆಲಸಗಳ ನಡುವಿನ ವ್ಯತ್ಯಾಸವನ್ನು ಕಾಣುವಲ್ಲಿ ಮತ್ತು ಹಾಗೆ ಕಳ್ಳಸಾಗಾಣಿಕೆಗೆ ಗುರಿಯಾದ ವ್ಯಕ್ತಿಗಳನ್ನು ಸಂರಕ್ಷಿಸುವಲ್ಲಿ ವಿಫಲವಾಗಿದ್ದು ಇದರ ಪರಿಣಾಮವಾಗಿ ಲೈಂಗಿಕ ಕಾರ್ಯಕರ್ತರ ಮೇಲೆ ಆಗುತ್ತಿರುವ ಹಿಂಸಾಚಾರ ದಿನೇ ದಿನೇ ಹೆಚ್ಚಲು ಕಾರಣವಾಗಿದೆ.

ವಿಪರ್ಯಾಸವೆಂದರೆ, ಸ್ವಾತಂತ್ರ್ಯ ಬಂದ ಒಂದು ದಶಕದ ನಂತರವೇ ಐಟಿಪಿಎ ಕಾಯಿದೆ ಜಾರಿಗೆ ಬಂದಿದ್ದರೂ 2013ಕ್ಕೂ ಮುಂಚಿನ ಯಾವುದೇ ಭಾರತದ ಕಾನೂನುಗಳಿಗೂ ಮಾನವ ಕಳ್ಳಸಾಗಾಣಿಕೆಯನ್ನು ವ್ಯಾಖ್ಯಾನಿಸಲು ಸಾಧ್ಯವಾಗಿರಲಿಲ್ಲ. ಲೈಂಗಿಕ ಕೆಲಸವನ್ನು ಅಪರಾಧದ ಕೆಲಸವೆಂದು, ಅಂತಹ ಕುಟುಂಬಗಳ ಮಕ್ಕಳನ್ನು ಸಾಕಿ ಬೆಳೆಸುವ ಹಕ್ಕುಗಳನ್ನು ಕಸಿದುಕೊಂಡು ಅದನ್ನು ಅಪರಾಧಿಗಳ ಕುಟುಂಬವೆಂದು, ತೀರ್ಮಾನಿಸಿ ಅವರನ್ನು ಅವರ ಮನೆಗಳು ಹಾಗೂ ವಾಸಸ್ಥಳದಿಂದ ಬಲವಂತವಾಗಿ ಹೊರದೂಡುತ್ತಿದೆ, ವಯಸ್ಕರ ಒಪ್ಪಿಗೆಯನ್ನು ನಿರ್ಲಕ್ಷಿಸುತ್ತಿದೆ. ಈ ಮೂಲಕ ಐಟಿಪಿಎ ಕಾಯಿದೆ ಲೈಂಗಿಕ ಕಾರ್ಯಕರ್ತರ ಬದುಕುಗಳ ಮೇಲೆ ವಿಷಮ ಪರಿಣಾಮ ಉಂಟು ಮಾಡುತ್ತಿದೆ. ಸದರಿ ಅಧ್ಯಯನವು ಕಾನೂನುಗಳು ಹಾಗೂ ಮಾನವ ಕಳ್ಳಸಾಗಾಣಿಕೆಗಳ ನಡುವೆ ಉಂಟಾಗಿರುವ ಬಿರುಕುಗಳನ್ನು ಆಧರಿಸಿದ ನ್ಯಾಯಮೂರ್ತಿಗಳ ವ್ಯಕ್ತಿಗತ ವ್ಯಾಖ್ಯಾನಗಳಂತಿರುವ ತೀರ್ಪುಗಳನ್ನು ವಿಶ್ಲೇಷಿಸುತ್ತದೆ.

**ಅಧ್ಯಯನ**

ಭಾರತದ ಮಾನವ ಕಳ್ಳಸಾಗಾಣಿಕೆ ನಿಷೇಧ ಕಾಯಿದೆಗಳು, ನಿರ್ದಿಷ್ಟವಾಗಿ ಅನೈತಿಕ ಮಾನವ ಕಳ್ಳಸಾಗಾಣಿಕೆ (ನಿಷೇಧ) ಕಾಯಿದೆ 1956 (ಐಟಿಪಿಎ), ಮಾನವ ಕಳ್ಳಸಾಗಾಣಿಕೆ ಹಾಗೂ ಲೈಂಗಿಕೆ ಕೆಲಸಗಳ ನಡುವಿನ ವ್ಯತ್ಯಾಸವನ್ನು ಕಾಣುವಲ್ಲಿ ಮತ್ತು ಹಾಗೆ ಕಳ್ಳಸಾಗಾಣಿಕೆಗೆ ಗುರಿಯಾದ ವ್ಯಕ್ತಿಗಳನ್ನು ಸಂರಕ್ಷಿಸುವಲ್ಲಿ ವಿಫಲವಾಗಿದ್ದು ಇದರ ಪರಿಣಾಮವಾಗಿ ಲೈಂಗಿಕ ಕಾರ್ಯಕರ್ತರ ಮೇಲೆ ಆಗುತ್ತಿರುವ ಹಿಂಸಾಚಾರ ದಿನೇ ದಿನೇ ಹೆಚ್ಚಲು ಕಾರಣವಾಗಿದೆ.

ಈ ಸಂಶೋಧನೆಯು ಭಾರತದ ಮಾನವ ಹಕ್ಕು ಹೋರಾಟಗಾರರು, ಮಾನವ ಹಕ್ಕು ಸಂಶೋಧನಾ ಏಜೆನ್ಸಿಗಳು ಹಾಗೂ ಲೈಂಗಿಕ ಕಾರ್ಯಕರ್ತರ ಪಾಲುದಾರಿಕೆಯಿಂದ ರೂಪುಗೊಂಡುದಾಗಿದೆ. ಈ ಸಂಶೋಧನೆಯನ್ನು ವೇಶ್ಯಾ ಅನ್ಯಾಯ ಮುಕ್ತಿ ಪರಿಷತ್ (ವಿಎಎಂಪಿ), ಸಂಗ್ರಾಮ್ ಎಂಬ ಹೆಸರಿನ ಎನ್‌ಜಿಓ ಹಾಗೂ ನೆದರ್‌ಲ್ಯಾಂಡ್‌ನ ರೈಟ್ಸ್ ಫಾರ್ ಚೇಂಜ್ ಎಂಬ ಸಂಸ್ಥೆಗಳು ಸಾಮೂಹಿಕವಾಗಿ ನಡೆಸಿವೆ. ವೇಶ್ಯಾ ಅನ್ಯಾಯ ಮುಕ್ತಿ ಪರಿಷತ್, ಸಹೇಲಿ ಎಚ್‌ಐವಿ/ಏಡ್ಸ್ ಕಾರ್ಯಕರ್ತ ಸಂಘ ಹಾಗೂ ಮಹಾರಾಷ್ಟ್ರದ ಆಧಾರ ಬಹೂದ್ದೇಶೀಯ ಸಂಸ್ಥೆ, ಉತ್ತರ ಕರ್ನಾಟಕದ ಮಹಿಳಾ ಒಕ್ಕೂಟ, ಕೇರಳದ ಕೇರಳಾ ನೆಟ್‌ವರ್ಕ್ ಆಫ್ ಸೆಕ್ಸ್ ವರ್ಕರ್ಸ್ ಹಾಗೂ ಜಾರ್ಖಂಡ್‌ನ ಸೃಜನ್ ಫೌಂಡೇಷನ್‌ಗಳು ಅಧ್ಯಯನದ ಪಾಲುದಾರರುಗಳಾಗಿದ್ದಾರೆ. ಅಧ್ಯಯನದ ಉದ್ದೇಶ:

- ಭಾರತದಲ್ಲಿ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಮಾನದಂಡಗಳನ್ನು ಲೈಂಗಿಕ ಕಾರ್ಯಕರ್ತರಿಗೂ ಅನ್ವಯಿಸುವುದು.
- ಲೈಂಗಿಕ ಕಾರ್ಯಕರ್ತರು ಮಾನವ ಹಕ್ಕುಗಳ ಮಾನದಂಡಗಳನ್ನು ಅರ್ಥಮಾಡಿಕೊಳ್ಳುವಂತೆ ಮಾಡಿ ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣಾ ಪ್ರಕ್ರಿಯೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ಸಕ್ರಿಯಗೊಳಿಸುವುದು.

- ಎಲ್ಲಾ ನಾಗರಿಕರಿಗೆ ಅನ್ವಯಿಸುವ ಹಕ್ಕುಗಳು ಹಾಗೂ ಅದು ಲೈಂಗಿಕ ಕಾರ್ಯಕರ್ತರ ಜೀವನದಲ್ಲಿ ಅನ್ವಯವಾಗುತ್ತಿರುವುದರ ನಡುವಿನ ಅಂತರವನ್ನು ಗುರುತಿಸುವುದು.
- ಲೈಂಗಿಕ ಕಾರ್ಯಕರ್ತರು ಎದುರಿಸಿದ ಹಿಂಸಾಚಾರ ಮತ್ತು ಉಲ್ಲಂಘನೆಗಳ ಅನುಭವಗಳನ್ನು ನಿರೂಪಿಸುವುದು.
- ದಾಳಿಗಳು ಹಾಗೂ ಪುನರ್ವಸತಿ ಉಪಕ್ರಮಗಳು ಲೈಂಗಿಕ ಕಾರ್ಯಕರ್ತರ ಜೀವನದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂದು ನಿರೂಪಿಸಿ ವಿಶ್ಲೇಷಿಸುವುದು.
- ಲೈಂಗಿಕ ವೃತ್ತಿಗೆ ಸಮ್ಮತಿಯಿಂದಲೇ ತೊಡಗಿರುವ ವಯಸ್ಕರಿಗೆ ಮಾನವ ಕಳ್ಳಸಾಗಣೆ ವಿರೋಧೀ ಕಾನೂನುಗಳು ಮತ್ತು ನೀತಿಗಳು ಹೇಗೆ ಅನ್ವಯಿಸಲ್ಪಡುತ್ತವೆ ಎನ್ನುವುದನ್ನು ಸಮುದಾಯ ನಿರೂಪಣೆಯ ಮೂಲಕ ವಿಶ್ಲೇಷಿಸುವುದು.

**ಸಂಶೋಧನೆ**

ಜಾರ್ಖಂಡ್, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರಗಳು ಅಧ್ಯಯನ ಕ್ಷೇತ್ರಗಳಾಗಿದ್ದು ವಿಎಎಂಪಿ ಹಾಗೂ ಸಂಗ್ರಾಮ್ ಸಂಸ್ಥೆಗಳು ಈ ಸ್ಥಳಗಳಲ್ಲಿ ಸಾಮೂಹಿಕವಾಗಿ ಲೈಂಗಿಕ ಕಾರ್ಯಕರ್ತರ ಪೈಕಿ ಸಂಶೋಧನಾ ತಂಡವನ್ನು ಆಯ್ಕೆ ಮಾಡಿ ಅಧ್ಯಯನದ ವ್ಯಾಪ್ತಿಯನ್ನು ಅಭಿವೃದ್ಧಿಪಡಿಸಿದೆ. ಜೂನ್ 2015ರಲ್ಲಿ ಮಾನವ ಕಳ್ಳಸಾಗಾಣಿಕಾ ನಿಷೇಧ ಕಾನೂನುಗಳು ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಮೇಲೆ ಉಂಟು ಮಾಡುತ್ತಿರುವ ಪರಿಣಾಮದ ಪರಿಶೀಲನೆ' ಎಂಬ ತರಬೇತಿ ಕಾರ್ಯಾಗಾರ ನಡೆಸಲಾಗಿದ್ದು ಈ ಕಾರ್ಯಾಗಾರದಲ್ಲಿ ಅಧ್ಯಯನದ ಸೈದ್ಧಾಂತಿಕ ಚೌಕಟ್ಟನ್ನು ಸಿದ್ಧಪಡಿಸಲಾಯಿತು. 'ಸಾಮೂಹಿಕ ಸಂಶೋಧನಾ ಮಾರ್ಗದರ್ಶಿ' ಅಧ್ಯಯನದ ವಿಧಿವಿಧಾನಗಳನ್ನು ಒಳಗೊಂಡಿದ್ದು ಇದನ್ನು ಸಂಶೋಧಕರಿಗೆ ವಿತರಿಸಲಾಯಿತು.

ಅಧ್ಯಯನವು ರೈಟ್ ಗೈಡ್ ಅನ್ನು ಅಳವಡಿಸಿಕೊಂಡಿದ್ದು ಇದು ಮಾನವ ಕಳ್ಳಸಾಗಾಣಿಕಾ ನಿಷೇಧ ಕಾನೂನು ಹಾಗೂ ಪಾಲಿಸಿಗಳು ಮಾನವ ಹಕ್ಕುಗಳ ಮೇಲೆ ಉಂಟು ಮಾಡುವ ಪರಿಣಾಮವನ್ನು ಪರಿಶೀಲಿಸುತ್ತದೆ ಮತ್ತು ಈ ಪರಿಶೀಲನೆಯನ್ನು ಸರ್ಕಾರದ ಮಾನವ ಹಕ್ಕುಗಳ ನೀತಿಗಳಿಗೆ ಸಂಪರ್ಕ ಕಲ್ಪಿಸುತ್ತದೆ ಮತ್ತು ಇದರ ಫಲಿತವನ್ನು ಪಾಲಿಸಿಗಳ ಸುಧಾರಣೆಗೆ ಮತ್ತು ಮಾನವ ಹಕ್ಕುಗಳನ್ನು ಇನ್ನೂ ಪರಿಣಾಮಕಾರಿಯಾಗಿ ನಿರ್ವಹಿಸಲು ಬಳಸಲಾಗುತ್ತದೆ. ರಾಜ್ಯದ ಅಕೌಂಟೆಬಲಿಟಿ, ತಿಳಿವಳಿಕೆ/ಪುರಾವೆ ಆಧಾರಿತ ಕ್ರಿಯೆ, ಪಾಲ್ಗೊಳ್ಳುವಿಕೆ ಮತ್ತು ಚಳವಳಿಗಳನ್ನು ಸಂಪರ್ಕಿಸುವುದು, ಸಂಬಂಧಗಳನ್ನು ನಿರ್ಮಿಸುವುದು ರೈಟ್ ಗೈಡ್‌ನ ಮೂಲ ಆಶಯವಾಗಿದೆ.

ಎಲ್ಲಾ ನಾಲ್ಕು ರಾಜ್ಯಗಳಲ್ಲಿ ಕೇಂದ್ರೀಕೃತ ಸಾಮೂಹಿಕ ಚರ್ಚೆಗಳನ್ನು (14 ಎಫ್‌ಜಿಡಿಗಳಿಂದ 156 ಮಂದಿ ಪಾಲ್ಗೊಂಡಿದ್ದರು), ಸರ್ವೇಕ್ಷಣೆ (243 ಪಾಲ್ಗೊಂಡಿದ್ದರು) ಹಾಗೂ ಸಂದರ್ಶನಗಳನ್ನೂ (23) ಒಳಗೊಂಡ ಪ್ರಾಥಮಿಕ ಮೂಲವನ್ನು ಬಳಸಿ ಸಂಶೋಧನೆ ಕೈಗೊಳ್ಳಲಾಯಿತು. ಕಾನೂನುಗಳು ಹಾಗೂ ಒಪ್ಪಂದ ದಾಖಲೆಗಳು ಹಾಗೂ ವಿಶ್ವಸಂಸ್ಥೆಯ ಅಂಗಸಂಸ್ಥೆಗಳಿಗೆ ಭಾರತ ನೀಡಿದ ವರದಿಗಳು ಹಾಗೂ ನ್ಯಾಯಿಕ ತೀರ್ಪುಗಳ ವಿಶ್ಲೇಷಣೆ ಎರಡನೆಯ ಮೂಲಗಳಾಗಿವೆ. ಜೊತೆಗೆ ಭಾರತೀಯ ದಂಡಸಂಹಿತೆ, ಬಾಲಾಪರಾಧ ನ್ಯಾಯಿಕ ಕಾಯಿದೆ ಹಾಗೂ ಇತರ ಕಾನೂನುಗಳ ಅಡಿಯಲ್ಲಿ ಬರುವ ಪ್ರಕರಣಗಳಿಗೆ ನೀಡಲಾದ ಐಟಿಪಿಎ ತೀರ್ಪುಗಳನ್ನು ಸಹ ವಿಶ್ಲೇಷಿಸಲಾಗಿದೆ. ಮಾಹಿತಿ ಸಂಗ್ರಹಣೆಗೆ ಮಾಹಿತಿ ಹಕ್ಕು ಅರ್ಜಿಗಳನ್ನು ಸಹ ಬಳಸಲಾಗಿದೆ.

ಅಧ್ಯಯನವು ರೈಟ್ ಗೈಡ್ ಅನ್ನು ಅಳವಡಿಸಿಕೊಂಡಿದ್ದು ಇದು ಮಾನವ ಕಳ್ಳಸಾಗಾಣಿಕಾ ನಿಷೇಧ ಕಾನೂನು ಹಾಗೂ ಪಾಲಿಸಿಗಳು ಮಾನವ ಹಕ್ಕುಗಳ ಮೇಲೆ ಉಂಟು ಮಾಡುವ ಪರಿಣಾಮವನ್ನು ಪರಿಶೀಲಿಸುತ್ತದೆ ಮತ್ತು ಈ ಪರಿಶೀಲನೆಯನ್ನು ಸರ್ಕಾರದ ಮಾನವ ಹಕ್ಕುಗಳ ನೀತಿಗಳಿಗೆ ಸಂಪರ್ಕ ಕಲ್ಪಿಸುತ್ತದೆ ಮತ್ತು ಇದರ ಫಲಿತವನ್ನು ಪಾಲಿಸಿಗಳ ಸುಧಾರಣೆಗೆ ಮತ್ತು ಮಾನವ ಹಕ್ಕುಗಳನ್ನು ಇನ್ನೂ ಪರಿಣಾಮಕಾರಿಯಾಗಿ ನಿರ್ವಹಿಸಲು ಬಳಸಲಾಗುತ್ತದೆ.

ಈ ಸಂಶೋಧನೆಯು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ, ಬೀದಿಗಳಲ್ಲಿ, ವೇಶ್ಯಾಗೃಹಗಳು ಹಾಗೂ ಲಾಡ್ಜ್‌ಗಳಲ್ಲಿನ ಜೊತೆಗೆ ಬಹಿರಂಗಪಡಿಸದೆ ಗುಟ್ಟಾಗಿ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಲೈಂಗಿಕ ಕಾರ್ಯಕರ್ತರ ಮೇಲೆ ಮಾನವ ಕಳ್ಳಸಾಗಾಣಿಕೆ ನಿಷೇಧ ಕಾನೂನುಗಳಿಂದ ಆಗುವ ಪರಿಣಾಮವನ್ನು ಅಧ್ಯಯಿಸಿದೆ. ಈ ಮಾನದಂಡಗಳನ್ನು ಆಧರಿಸಿ ಅಧ್ಯಯನದಲ್ಲಿ ಪಾಲ್ಗೊಳ್ಳುವವರನ್ನು ಗುರುತಿಸಲಾಯಿತು. ಸಂಶೋಧನೆಯ ಅವಧಿಯ ಆಚೆಗೂ ಲೈಂಗಿಕ ಕಾರ್ಯಕರ್ತರು ಅಭಿಯಾನದ ಕಾರ್ಯತಂತ್ರಗಳಲ್ಲಿನ ಫಲಿತಗಳನ್ನು ಮುಂದುವರಿಸಲು ಸಾಧ್ಯವಾಗುವಂತೆ ಲೈಂಗಿಕ ಕಾರ್ಯಕರ್ತರುಗಳ ಸಂಘಟನೆಗಳು ಎಲ್ಲೆಲ್ಲಿ ಕ್ರಿಯಾಶೀಲವಾಗಿವೆಯೂ ಅಂತಹ ಕಡೆಗಳಲ್ಲಿ ಸಂಶೋಧನೆ ಕೈಗೊಳ್ಳಲಾಯಿತು.
ಪ್ರಾಥಮಿಕ ಫಲಿತಗಳನ್ನು ವ್ಯಾಲಿಡೇಷನ್ ಸಭೆಯಲ್ಲಿ ಪ್ರಸ್ತುತಪಡಿಸಲಾಗಿದ್ದು ಇದರಲ್ಲಿ ಸಂಶೋಧಕರು ಹಾಗೂ ಪಾಲುದಾರಿಕಾ ಸಂಸ್ಥೆಗಳ ಸದಸ್ಯರುಗಳು ಭಾಗವಹಿಸಿದ್ದರು. ಕೆಲವು ಸೇರ್ಪಡೆಗಳು ಹಾಗೂ ಶಿಫಾರಸುಗಳನ್ನು ಚರ್ಚಿಸಲಾಯಿತು ಮತ್ತು ಫಲಿತಗಳನ್ನು ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಯಿತು.

ಮಹಾರಾಷ್ಟ್ರದ ಕೋಲ್ಹಾಪುರ್, ಜಲ್ಗಾಂವ್, ಪುಣೆ ಮತ್ತು ಸಾಂಗ್ಲಿ ಎಂಬ ನಾಲ್ಕು ಪಟ್ಟಣಗಳಲ್ಲಿ 2005 ಮತ್ತು 2017 ರ ನಡುವೆ 243 ಮಹಿಳೆಯರಿಗೆ ದಾಳಿ ನಡೆದಿದ್ದು ಇವರನ್ನು ಸಂದರ್ಶಿಸಿ, ಇವರೊಂದಿಗೆ ಗುಂಪು ಚರ್ಚೆಗಳನ್ನು ನಡೆಸಿ, ಇವರ ಮನೆಗಳಿಗೆ ಭೇಟಿ ನೀಡಿ ಮತ್ತು ಪುನರ್ವಸತಿ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿದೆ.

ಪುನರ್ವಸತಿ ಮನೆಗಳು, ಕೇಂದ್ರಗಳಿಂದ ಬಿಡುಗಡೆಯಾದ/ಕಳುಹಿಸಲಾದ ಅಥವಾ ಅಲ್ಲಿಂದ ತಪ್ಪಿಸಿಕೊಂಡ ನಂತರ ಪತ್ತೆಯಾದ ಮಹಿಳೆಯರೊಂದಿಗೆ ಎರಡನೆಯ ಹಂತದ ಸಂಶೋಧನೆ ನಡೆಸಲಾಗಿದ್ದು ದಾಳಿಗಳಲ್ಲಿ ಸಂರಕ್ಷಿಸಲ್ಪಟ್ಟವರು, ಪುನರ್ವಸತಿ ಕಲ್ಪಿಸಿಕೊಂಡವರು ಅಂತಹ ಪುನರ್ವಸತಿಗಳಿಂದ ಇದು ಬಿಡುಗಡೆಯಾದ ಮೇಲೆ ತಮ್ಮ ಸ್ವ ಇಚ್ಛೆಯಿಂದ ಲೈಂಗಿಕ ಕೆಲಸದಲ್ಲಿ ತೊಡಗಿದ ಮಹಿಳೆಯರ ಅನುಭವದ ಸುತ್ತ ಸಂಶೋಧನೆ ನಡೆಸಲಾಯಿತು.

ವೇಶ್ಯಾಗೃಹಗಳಲ್ಲಿ ಕೆಲಸ ಮಾಡುತ್ತಿರುವ ಸಂಘಟನೆಗಳು, ಸಿಬಿಓಗಳು ಹಾಗೂ ಎನ್‌ಜಿಓಗಳು ದಾಳಿಯ ಮಾಹಿತಿ ಸಂಗ್ರಹಿಸಿ ಹಾಗೆ ದಾಳಿಯಲ್ಲಿ ಹಿಡಿಯಲ್ಪಟ್ಟ ಮಹಿಳೆಯರ ಮಾಹಿತಿ ಕಲೆಹಾಕಿವೆ. ಪುಣೆಯಲ್ಲಿ ಸಮುದಾಯ ಸಂಶೋಧಕರು ದಾಳಿಗೆ ಒಳಪಟ್ಟು ಬಳಿಕ ಪುನರ್ವಸತಿ ಗೃಹಗಳಿಂದ ಬಿಡುಗಡೆಯಾದ ವ್ಯಕ್ತಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ. ಪುನರ್ವಸತಿ ಗೃಹಕ್ಕೆ ಕಳುಹಿಸಲ್ಪಟ್ಟವರ ಸ್ಥಿತಿಗತಿಗಳನ್ನು ಅರಿಯಲು ಅವರು ಮಾಹಿತಿ ಹಕ್ಕು ಅರ್ಜಿಯನ್ನು ಸಹ ಸಲ್ಲಿಸಿ ಅಂತಹ ಮಹಿಳೆಯರೊಡನೆ ಮಾತುಕತೆ ನಡೆಸಲು ಪುನರ್ವಸತಿ ಗೃಹಕ್ಕೆ ಭೇಟಿ ನೀಡಿದ್ದಾರೆ. ಸಮುದಾಯ ಸಂಶೋಧಕರು ದಾಳಿಗೆ ಒಳಪಟ್ಟ ಮಹಿಳೆಯರ ಸಂದರ್ಶನ ನಡೆಸಿದ್ದಲ್ಲದೆ ಅವರೊಂದಿಗೆ ಸಾಮೂಹಿಕ ಚರ್ಚೆ ಸಹ ನಡೆಸಿದ್ದಾರೆ.

ಸಂದರ್ಶನದಲ್ಲಿ ಪಾಲ್ಗೊಂಡ ಬಹುತೇಕ ಮಹಿಳೆಯರು ಕೋರ್ಟಿಗೆ ಅಥವಾ ಪುನರ್ವಸತಿ ಎನ್‌ಜಿಓಗಳಿಗೆ ಅಫಿಡವಿಟ್ ನೀಡಿ ಇನ್ನು ಮುಂದೆ ಲೈಂಗಿಕ ಕೆಲಸ ಬಿಟ್ಟುಬಿಡುತ್ತೇವೆ ಎಂಬ ಪೂರ್ವ ಷರತ್ತಿನ ಮೇರೆಗೆ ಬಿಡುಗಡೆಯಾಗಿರುವ ಪ್ರಯುಕ್ತ ಅಂತಹವರ ವಿಷಯದಲ್ಲಿ ಸೂಕ್ಷ್ಮವಾಗಿ ನಡೆದುಕೊಳ್ಳಲಾಯಿತು. ಕೆಲವು ವ್ಯಕ್ತಿಗಳ ಗುರುತನ್ನು ಮರೆಮಾಚಿ ಗೌಪ್ಯತೆಯನ್ನು ಸಹ ಕಾಪಾಡಿಕೊಳ್ಳಲಾಯಿತು.

**ಫಲಿತಗಳು**

ಈ ಕೆಲವು ಗಂಭೀರ ಪ್ರಶ್ನೆಗಳಿಗೆ ಉತ್ತರಿಸಲು ಪುರಾವೆಗಳನ್ನು ಸಂಗ್ರಹಿಸಲು ಅಧ್ಯಯನ ಕೈಗೊಳ್ಳಲಾಯಿತು. ಆ ಪ್ರಶ್ನೆಗಳೆಂದರೆ: ಮಹಿಳೆಯರು ಲೈಂಗಿಕ ಕೆಲಸಕ್ಕೆ ಬಲವಂತವಾಗಿ ಪ್ರವೇಶಿಸಿದ್ದರೆ ಅವರು ಸ್ವಯಂ ಇಚ್ಛೆಯಿಂದ ಲೈಂಗಿಕ ಕೆಲಸಕ್ಕೆ ಮರಳಲು ಏಕೆ ಬಯಸುತ್ತಾರೆ? ಇತರ ಉದ್ಯೋಗಗಳನ್ನು ಮಾಡಲು ಕೌಶಲ್ಯ ಕೊರತೆಯಿಂದಾಗಿ ಅವರು ಪ್ರವೇಶಿಸಿದ್ದರೆ, ಅವರು ಗಳಿಸಿದ ಕೌಶಲ್ಯಗಳನ್ನು ಕಲಿತ ನಂತರ ಅವರು ಏಕೆ ಲೈಂಗಿಕ ಕೆಲಸಕ್ಕೆ ಹಿಂದಿರುಗುತ್ತಾರೆ?
'ಸನ್ನಿವೇಶದ ಒತ್ತಾಯದಿಂದ' ಅವರು ಲೈಂಗಿಕ ಕೆಲಸಕ್ಕೆ ಪ್ರವೇಶಿಸಿದ್ದರೆ, ಪರಿಸ್ಥಿತಿಗಳು ಉತ್ತಮ ಸ್ಥಿತಿಯಲ್ಲಿ ಬದಲಾಗುತ್ತಿರುವಾಗ ಅವರು ಏಕೆ ಲೈಂಗಿಕ ಕೆಲಸಕ್ಕೆ ಹಿಂದಿರುಗುತ್ತಾರೆ? ಮೋಸದ ಕಾರಣದಿಂದ, ಪ್ರಲೋಭನೆಯಿಂದ ಅಥವಾ ವಿಶ್ವಾಸಾರ್ಹರಲ್ಲದ ವ್ಯಕ್ತಿಗಳ ಕಾರಣದಿಂದ ಅವರು ಲೈಂಗಿಕ ಕೆಲಸಕ್ಕೆ ಪ್ರವೇಶಿಸಿದ್ದರೆ, "ಹೊಸ" ಜೀವನವನ್ನು ಮಾಡಲು ಅವಕಾಶವನ್ನು ನೀಡಿದಾಗ ಅವರು ಏಕೆ ಲೈಂಗಿಕ ಕೆಲಸಕ್ಕೆ ಹಿಂದಿರುಗುತ್ತಾರೆ? ಜೀವನ ಆಯ್ಕೆಗಳ ಕೊರತೆಯಿಂದಾಗಿ ಅವರು ಪ್ರವೇಶಿಸಿದರೆ, ಅವರು ಮರಳಲು 'ಆಯ್ಕೆ' ಯಾಕೆ ಮಾಡಿಕೊಳ್ಳುತ್ತಾರೆ?

**ಈ ಕೆಳಗಿನವು ಸಂಶೋಧನಾ ಫಲಿತದ ಸಾರಾಂಶವಾಗಿದೆ:**

ದಾಳಿ ಪ್ರಕ್ರಿಯೆಯಲ್ಲಿ ಸಂರಕ್ಷಿಸಲ್ಪಟ್ಟ ಬಲಿಪಶುವಾದ ವ್ಯಕ್ತಿಗಳ ಬಗ್ಗೆ ಗುರುತರವಾದ ಕೀಳುಭಾವನೆ ಇರುವುದು ಕಂಡುಬರುತ್ತದೆ. ಈ ದಾಳಿಗಳಲ್ಲಿ ಅವಮಾನ, ಮೌಖಿಕ ಹಾಗೂ ದೈಹಿಕ ದುರ್ನಡತೆ ಪದೇ ಪದೇ ಕಂಡುಬರುತ್ತದೆ.

ನೈತಿಕ ಹಾಗೂ ಯಾದೃಚ್ಛಿಕ ಕಾನೂನುಗಳು:

- ಸಮಸ್ಯೆಯ ಮೂಲ ಕಾರಣ ಕಾಯಿದೆಯಾಗಿದೆ. ಅನೈತಿಕ ಮಾನವ ಸಾಗಾಣಿಕಾ ನಿಷೇಧ ಕಾಯಿದೆ (ಐಟಿಪಿಎ) ಎಂಬ ಕಾಯಿದೆಯ ಹೆಸರಿನಲ್ಲೇ 'ಅನೈತಿಕತೆ'ಯ ಬಗ್ಗೆ ಮತ್ತು ಮಹಿಳೆಯರ 'ಸಾಗಾಣಿಕೆ'ಯ ಬಗ್ಗೆ ಗೊಂದಲವಿದೆ. ಲೈಂಗಿಕ ಕಾರ್ಯಕರ್ತರ ವಿರೋಧೀ ನೆಲೆಯಿಂದ ಇದನ್ನೆಲ್ಲ ವ್ಯಾಖ್ಯಾನಿಸಲಾಗಿದೆ.
- ಭಾರತೀಯ ಉಚ್ಚ ನ್ಯಾಯಾಲಯಗಳು ಹಾಗೂ ಸರ್ವೋಚ್ಚ ನ್ಯಾಯಾಲಯದ 2010–2017ರವರೆಗಿನ ಕಾನೂನಾತ್ಮಕ ಪ್ರಕರಣಗಳನ್ನು ವಿಶ್ಲೇಷಿಸಲಾಗಿದೆ. ಪ್ರಕರಣಗಳ ಸಂಖ್ಯೆಯಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆ ಕಂಡಿದ್ದು ಕಾನೂನಿನ ಬಲದಿಂದ ಲೈಂಗಿಕ ಕೆಲಸವನ್ನು ನಿಷೇಧಿಸಬೇಕೆಂಬ ಲಾಬಿ ಈ ಪ್ರಕರಣಗಳಲ್ಲಿ ಕೆಲಸ ಮಾಡಿರುವುದು ಕಂಡುಬರುತ್ತದೆ.
- ಕಾನೂನು ವ್ಯವಸ್ಥೆ ಅಂದರೆ ನ್ಯಾಯಾಲಯಗಳ ವ್ಯಾಖ್ಯಾನಗಳು, ಆದೇಶಗಳು ಹಾಗೂ ತೀರ್ಪುಗಳು ಲೈಂಗಿಕ ಕೆಲಸಕ್ಕೆ ನೈತಿಕ ಅಸಮ್ಮತಿ ವ್ಯಕ್ತಪಡಿಸಿದ್ದು ಹೆಣ್ಣುಮಕ್ಕಳು ಕುಟುಂಬ ವ್ಯವಸ್ಥೆಯಲ್ಲಿ 'ಸುರಕ್ಷಿತ'ವಾಗಿ ಇರುತ್ತಾರೆ ಎಂಬ ತೀರ್ಪಿನೊಂದಿಗೆ ಮಹಿಳೆಯರನ್ನು ಕುಬ್ಜಗೊಳಿಸಲಾಗಿದೆ ಮತ್ತು ಲೈಂಗಿಕ ಕಾರ್ಯಕರ್ತರಾಗಿ ಕೆಲಸ ಮಾಡುವುದು ಕಾನೂನುಬಾಹಿರ ಎಂದು ತೀರ್ಮಾನಿಸಿ

ಹೊಟ್ಟೆಪಾಡಿಗಾಗಿ ದುಡಿಯುವವರನ್ನು ಅಪರಾಧಿಗಳೆಂದು ತೀರ್ಪು ನೀಡಲಾಗಿದೆ. ಇದರಿಂದ ಅವರ ಜೀವನೋಪಾಯಕ್ಕೆ ಅಡಚಣೆಯಾಗಿರುವುದಲ್ಲದೆ ಮೂರನೆಯ ವ್ಯಕ್ತಿಗಳು ಅಂದರೆ ವೇಶ್ಯಾಗೃಹ ನಡೆಸುವವರು ಹಾಗೂ ಗಿರಾಕಿಗಳನ್ನು ಅಪರಾಧಿಗಳೆಂದು ಬಿಂಬಿಸಿ ಲೈಂಗಿಕ ಕಾರ್ಯಕರ್ತರ ಸುರಕ್ಷತೆಯ ವ್ಯವಸ್ಥೆಯ ಮೇಲೂ ವಿಷಮ ಪರಿಣಾಮವಾಗಿದೆ.

- ಕಾನೂನು ಜಾರಿ ಕಾರ್ಯವಿಧಾನಗಳು ಲೈಂಗಿಕ ಕೆಲಸಗಾರರಿಗೆ ವಿರುದ್ಧವಾಗಿದ್ದು ಪೊಲೀಸರು ತಮ್ಮ ಹಿಂಸಾಚಾರ, ಕಾರಾಗೃಹವಾಸ, ದಂಡ ಮತ್ತು ಸುಲಿಗೆ ಮಾಡುವಿಕೆಯನ್ನು ಸಮರ್ಥಿಸಲು ಕಾನೂನನ್ನು ಆಗಾಗ್ಗೆ ಬಳಸುತ್ತಾರೆ ಮತ್ತು ಕಾನೂನು ವ್ಯವಸ್ಥೆಯ ಬಗ್ಗೆ ಸ್ವಲ್ಪ ಮಾತ್ರವಷ್ಟೇ ಭರವಸೆ ಉಳಿಯುವಂತಾಗಿದೆ.

**ದಾಳಿ ಮತ್ತು ತದನಂತರ:**

- ದಾಳಿಯ ಸಮಯದಲ್ಲಿ ಪೊಲೀಸರ ಯಾದೃಚ್ಛಿಕ ಕ್ರಮಗಳಲ್ಲಿ ಲೈಂಗಿಕ ಕೆಲಸಗಾರರ ಹಕ್ಕುಗಳನ್ನು ತುಚ್ಛವಾಗಿ ಕಾಣಲಾಗಿದ್ದು ಅವರು ವಾಸಿಸುವ ಕಟ್ಟಡಗಳನ್ನು ವೇಶ್ಯಾಗೃಹಗಳೆಂದು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ.
- ದಾಳಿ ಪ್ರಕ್ರಿಯೆಯಲ್ಲಿ ಸಂರಕ್ಷಿಸಲ್ಪಟ್ಟ ಬಲಿಪಶುವಾದ ವ್ಯಕ್ತಿಗಳ ಬಗ್ಗೆ ಗುರುತರವಾದ ಕೀಳುಭಾವನೆ ಇರುವುದು ಕಂಡುಬರುತ್ತದೆ. ಈ ದಾಳಿಗಳಲ್ಲಿ ಅವಮಾನ, ಮೌಖಿಕ ಹಾಗೂ ದೈಹಿಕ ದುರ್ನಡತೆ ಪದೇ ಪದೇ ಕಂಡುಬರುತ್ತದೆ.
- ಪೊಲೀಸರು ಹಾಗೂ ಮಾಧ್ಯಮದವರ ಸಹಯೋಗದಿಂದ ಮಹಿಳೆಯರನ್ನು ಅವಮಾನಿಸುವ ಸಲುವಾಗಿ ಮತ್ತು ದಾಳಿಯ ಪ್ರಚೋದನಕಾರೀ ಸುದ್ದಿಯ ಪ್ರಚಾರಕ್ಕಾಗಿ ಮಾಧ್ಯಮಗಳ ದುರ್ಬಳಕೆ, ಖಾಸಗಿತನದ ಹಕ್ಕಿನ ಉಲ್ಲಂಘನೆ ಆಗುತ್ತಿದೆ.
- ಪೊಲೀಸ್ ದಾಳಿಯಿಂದ ಅಥವಾ ಪೊಲೀಸರ ದುರ್ನಡತೆಯಿಂದ ಅವರನ್ನು ಸಂರಕ್ಷಿಸಲು ಲೈಂಗಿಕ ಕೆಲಸಗಾರರ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ಮತ್ತು ಅವರಿಂದ ಹಣವನ್ನು ಸುಲಿಗೆ ಮಾಡುವ ವಿಧಾನವನ್ನು ಪೊಲೀಸರು ಒಂದು ಬಗೆಯ ಪರವಾನಿಗಿಯಂತೆ ಬಳಸಿಕೊಳ್ಳುತ್ತಾರೆ.
- ಕಾಂಡೋಮ್ ಬಳಸುವ ಲೈಂಗಿಕ ಕಾರ್ಯಕರ್ತರನ್ನು ಬಂಧಿಸಲು ಕಾನೂನನ್ನು ಹೀಗೆ ಬಳಸಿದಾಗ ಎಚ್ಐವಿ ತಡೆಗಟ್ಟುವಿಕೆಯ ಮೇಲೆ ವಿಷಮ ಪರಿಣಾಮ ಉಂಟಾಗುತ್ತದೆ, ದಾಳಿಯಿಂದ ಸೆರೆಹಿಡಿದವರನ್ನು ಬಲವಂತವಾಗಿ ತಪಾಸಣೆ ಮಾಡುವುದು ಮತ್ತು ಎಚ್ಐವಿ ಇದೆಯೇ ಇಲ್ಲವೇ ಎಂಬುದನ್ನು ಪ್ರಚಾರ ಮಾಡುವುದು ಕಾನೂನು ಸಮ್ಮತವಾದ ಕೆಲಸವಲ್ಲ.
- ಲೈಂಗಿಕ ಕಾರ್ಯಕರ್ತರ ಮೇಲೆ ಪೊಲೀಸರು ಹೀಗೆ ಹಿಂಸಾಚಾರ ಮಾಡಿದಾಗ ಇತರ ಸಾರ್ವಜನಿಕರೂ ಅವರೊಂದಿಗೆ ಇದೇ ರೀತಿ ನಡೆದುಕೊಳ್ಳಲು ಅನುವು ಮಾಡಿಕೊಟ್ಟಂತಾಗುತ್ತದೆ.
- ಪೊಲೀಸರ ದೌರ್ಜನ್ಯ ಸಾಮಾನ್ಯ ವಿಷಯವಾಗಿದೆ, ಕೆಲವು ಸಂದರ್ಭಗಳಲ್ಲಿ ಪೊಲೀಸ್ ವಶದಲ್ಲಿದ್ದಾಗ ಅವರನ್ನು ಬಲವಂತವಾಗಿ ದುಡಿಸಿಕೊಳ್ಳಲಾಗುತ್ತದೆ, ಹಿಂಸಿಸಲಾಗುತ್ತದೆ.
- ಲೈಂಗಿಕ ಕೆಲಸಗಾರರ ಮೇಲಾಗುತ್ತಿರುವ ಈ ವ್ಯವಸ್ಥಿತ ಅಪಮಾನ ನ್ಯಾಯಾಲಯದಲ್ಲಿಯೂ ಮುಂದುವರಿಯುತ್ತದೆ. ಅಲ್ಲಿ ಯಾವುದೇ ಕಾನೂನು ಪ್ರಕ್ರಿಯೆ ಆರಂಭವಾಗುವುದಕ್ಕಿಂತ ಮುಂಚಿತವಾಗಿ, ಬಂಧನಕ್ಕೊಳಗಾದ ಮಹಿಳೆಯರನ್ನು ಅಪರಾಧಿಗಳು ಎಂದು ಪರಿಗಣಿಸಲಾಗುತ್ತದೆ. ಅವರಿಗೆ ಸಿಗಬೇಕಾದ ಪರಿಹಾರ ಹಕ್ಕನ್ನು ನಿರಾಕರಿಸಲಾಗುತ್ತದೆ. ಎಷ್ಟೋ ಸಲ ಪ್ರಕರಣಗಳು ಹುಸಿಯಾದುದಾಗಿದ್ದರೂ ಅವರ ಅಪರಾಧವನ್ನು ಒಪ್ಪಿಕೊಳ್ಳುವಂತೆ ಅವರನ್ನು ಒತ್ತಾಯಿಸಲಾಗುತ್ತದೆ.

**ಸಂರಕ್ಷಣೆ: ಉತ್ತಮ ಬದುಕೆಂಬ ಭ್ರಮೆ**

- ಲೈಂಗಿಕ ಕೆಲಸದಿಂದ ರಕ್ಷಿತಳಾದ ಮಹಿಳೆಯರನ್ನು ಕೆಲವೊಮ್ಮೆ ಪುನರ್ವಸತಿ ಮನೆಗಳಲ್ಲಿ ಬಲವಂತವಾಗಿ ಲೈಂಗಿಕ ಸೇವೆಗಳಲ್ಲಿ ತೊಡಗಿಸಲಾಗುತ್ತದೆ. ಹೀಗೆ ಅವರು "ಪುನರ್ವಸತಿಗೆ ಬಲಿಯಾದವರು" ಆಗುತ್ತಾರೆ.
- ಬೆಳೆಯುತ್ತಿರುವ ಸಾಂಸ್ಥಿಕ ಆರ್ಥಿಕತೆಯ ಸಂದರ್ಭದಲ್ಲಿ "ಕೌಶಲ್ಯ ಅಭಿವೃದ್ಧಿ" ನಿಷ್ಪರಿಣಾಮಕಾರಿಯಾಗಿದೆ. ಅಲ್ಲಿ ಪಾಪಾಡ್ ಮತ್ತು ಉಪ್ಪಿನಕಾಯಿಗಳ ತಯಾರಿಕೆ ಹೊಲಿಯುವ ಅಥವಾ ಮಾಡುವಂತಹ ಕೌಶಲ್ಯಗಳು ಆರ್ಥಿಕವಾಗಿ ಸಮರ್ಥನೀಯವಾದುದಲ್ಲ.
- ನ್ಯಾಯಾಲಯಗಳ ಕಾರ್ಯವಿಧಾನದ ಅಂಶಗಳು ಲೈಂಗಿಕ ಕಾರ್ಯಕರ್ತರಿಗೆ ಅನುಕೂಲಕರವಾಗಿಲ್ಲ. ಅವರು ತಮ್ಮನ್ನು ತಾವು ಕಾಪಾಡಿಕೊಳ್ಳಲು ದೊಡ್ಡ ಪ್ರಮಾಣದಲ್ಲಿ ಹೆಚ್ಚಿನ ಬಡ್ಡಿದರದಲ್ಲಿ ಸಾಲವನ್ನು ಪಡೆಯಬೇಕಾಗುತ್ತದೆ.
- ಬಿಡುಗಡೆಯಾದ ಮೇಲೆ ಲೈಂಗಿಕ ಕೆಲಸಗಾರರು ಕಾರಾಗೃಹವಾಸದ ಅವಧಿಯಲ್ಲಿ ಜೀವನಾಧಾರದ ನಷ್ಟದಿಂದ ಬೃಹತ್ ಸಾಲಗಳನ್ನು ಮಾಡಬೇಕಾಗುತ್ತದೆ. ಅವರು ನಂತರ ಸಾಲದ ಬಂಧನ ಅಥವಾ ಇತರ ರೀತಿಯ ಶೋಷಣೆಗಳಿಗೆ ಒಳಗಾಗುತ್ತಾರೆ. ಇದು ಮಹಿಳೆಯರನ್ನು ಶೋಷಣೆಯಿಂದ ರಕ್ಷಿಸಲು ಪ್ರಯತ್ನಿಸುವ ಪ್ರಕ್ರಿಯೆಯ ವ್ಯಂಗ್ಯವಾಗಿದೆ.
- ಬಿಡುಗಡೆಯ ನಂತರ, ಲೈಂಗಿಕ ಕಾರ್ಯಕರ್ತರು ಹೆಚ್ಚು ದುರ್ಬಲರಾಗುತ್ತಾರೆ ಮತ್ತು ಮತ್ತಷ್ಟು ದಾಳಿಗಳನ್ನು ತಡೆಗಟ್ಟಲು ಪೊಲೀಸರಿಗೆ ಹೆಚ್ಚಿನ ಮೊತ್ತವನ್ನು ಪಾವತಿಸಿದ ವೇಶ್ಯಾಗೃಹ ಮಾಲೀಕರ ನಿಯಂತ್ರಣದಲ್ಲಿರುತ್ತಾರೆ. ಬೇರೆ ವಿಧಿಯಿಲ್ಲದೆ ಮೊಬಿಲಿಟಿ ಮತ್ತು ನಿಯಮಿತ ಆರೋಗ್ಯ ತಪಾಸಣೆಗಳಿಗೆ ಹಾಜರಾಗಬೇಕಾಗುತ್ತದೆ.

**ಸಮುದಾಯಗಳ ಮೂಲಕ ಮಾನವ ಕಳ್ಳಸಾಗಾಣಿಕೆಯ ವಿರುದ್ಧ ಹೋರಾಟ**

- ಮಹಿಳೆಯರು ಮತ್ತು ಬಾಲಕಿಯರನ್ನು ಲೈಂಗಿಕ ಕೆಲಸಗಳಿಗೆ ದೂಡುವ ಮಾನವ ಕಳ್ಳಸಾಗಾಣಿಕೆಯ ವಿರುದ್ಧ ಲೈಂಗಿಕ ಕೆಲಸಗಾರರ ಸಮುದಾಯಗಳ ಹೋರಾಟವು ಪರಿಣಾಮಕಾರಿಯಾದ ಕಾರ್ಯತಂತ್ರಗಳನ್ನು ರೂಪಿಸಿದೆ.

ದಾಳಿಯಿಂದ ಸೆರೆಹಿಡಿಯಲ್ಪಟ್ಟು ಸುರಕ್ಷಿತ ಗೃಹಗಳಿಗೆ ಕಳುಹಿಸಲಾದ ಬಹುತೇಕ ಲೈಂಗಿಕ ಕೆಲಸಗಾರರು ಬಿಡುಗಡೆಯಾದ ಮೇಲೆ ಪುನಃ ಲೈಂಗಿಕ ಕೆಲಸಕ್ಕೆ ಹಿಂದಿರುಗಿದ್ದಾರೆ. ಹೀಗೆ ಹಿಂದಿರುಗಿದವರ ಪೈಕಿ ಈ ಹಿಂದೆ ಮಾನವ ಕಳ್ಳಸಾಗಾಣಿಕೆಯ ಮೂಲಕ ಲೈಂಗಿಕ ಕೆಲಸಕ್ಕೆ ಸೇರಿದವರೂ ಹಾಗೆಯೇ ತಮ್ಮ ಸ್ವ ಇಚ್ಛೆಯಿಂದಲೇ ಈ ಕೆಲಸಕ್ಕೆ ಬಂದವರು ಇಬ್ಬರೂ ಇದ್ದಾರೆ. ದಾಳಿ ನಂತರ ಸಂರಕ್ಷಿಸಲ್ಪಟ್ಟವರು ಪ್ರಯಾಸದಿಂದ ತಾವಾಗೇ, ನಾವು ಲೈಂಗಿಕ ಕೆಲಸ ಬಿಟ್ಟುಬಿಡುತ್ತೇವೆ ಎಂದು ಪ್ರಮಾಣ ಮಾಡಿಸಿಕೊಂಡಿದ್ದಾಗ್ಯೂ ಸಹ, ಪುನಃ ಲೈಂಗಿಕ ಕೆಲಸಕ್ಕೆ ಹಿಂದಿರುಗಿದ್ದಾರೆ.

ಈ ಅಂಕಿಸಂಖ್ಯೆಗಳು ಏನು ಹೇಳುತ್ತವೆ, ಈ ಅಂಕಿಸಂಖ್ಯೆಗಳ ಹಿಂದೆ ನಿಂತು ನುಡಿಯುತ್ತಿರುವ ಮಹಿಳೆಯ ಧ್ವನಿಯನ್ನು ನಾವು ಆಲಿಸಬಲ್ಲೆವೇ?

1. ದಾಳಿ ಸಮಯದಲ್ಲಿ 0.82% (243 ರಲ್ಲಿ 2) ಕಿರುವಯಸ್ಸಿನವರು, ಉಳಿದವರು ವಯಸ್ಕರು

2. ದಾಳಿಯ ಸಮಯದಲ್ಲಿ ಮಹಿಳೆಯರ ಪೈಕಿ 79% (243 ರಲ್ಲಿ 193) ಮಂದಿ ತಾವು ಸ್ವ ಇಚ್ಛೆಯಿಂದ ಲೈಂಗಿಕ ಕೆಲಸ ಮಾಡುತ್ತಿದ್ದೇವೆ ಮತ್ತು ನಮ್ಮನ್ನು "ಪಾರುಮಾಡುವ" ಅಗತ್ಯವಿಲ್ಲ ಎಂದು ಬಯಸಿದ್ದರು.
3. 36% (36 ರಲ್ಲಿ 13) ಕಳ್ಳಸಾಗಣೆ ಮಾಡಿದ ಮಹಿಳೆಯರು ಪ್ರಸ್ತುತ ಲೈಂಗಿಕ ಕೆಲಸ ಮಾಡುತ್ತಿದ್ದಾರೆ ಮತ್ತು ಅವರು ಈ ಕೆಲಸದಲ್ಲೇ ಉಳಿಯಲು ಬಯಸುತ್ತೇವೆ ಎಂದು ಹೇಳಿದ್ದಾರೆ.
4. ಬಿಡುಗಡೆಯಾದ ಮಹಿಳೆಯರು 77% (218 ರಲ್ಲಿ 168), ಲೈಂಗಿಕ ಕೆಲಸಕ್ಕೆ ಮರಳಿದವರಾಗಿದ್ದಾರೆ.

**ಕೊನೆಯ ಮಾತು: ಮುಖ್ಯಾಂಶಗಳು:**

ದಾಳಿಗೆ ಆದೇಶಿಸುವ ಮತ್ತು ದಾಳಿ ನಡೆಸುವ ಪೊಲೀಸರು, ಎನ್‌ಜಿಓಗಳು ಮತ್ತು ಇತರರು ಸಾಮಾನ್ಯವಾಗಿ ತಾವು ಯಾವ ವ್ಯಕ್ತಿಗಳ ಮೇಲೆ ದಾಳಿ ನಡೆಸುತ್ತಾರೆಯೋ ಅವರ ಬಗ್ಗೆ ಸೂಕ್ಷ್ಮತೆಯಿಂದ ವರ್ತಿಸುವುದಿಲ್ಲ, ಸಂದರ್ಭದ ಜಟಿಲತೆಯನ್ನು ಬಲ್ಲವರಲ್ಲ. ಇವರ ಈ ಕಾರ್ಯಾಚರಣೆಯಲ್ಲಿ ತಾವು 'ಬಲಿಪಶುಗಳನ್ನು' ಪಾರುಮಾಡುತ್ತಿದ್ದೇವೆ ಎಂಬ ಧೋರಣೆಯೇ ಹೆಚ್ಚಾಗಿ ಇರುತ್ತದೆ. ಇವರಿಂದ ಪಾರು ಮಾಡಲ್ಪಟ್ಟವರ ಮಾತುಗಳನ್ನು ಕೇಳಲು ಇವರು ಸಿದ್ಧರಿರುವುದಿಲ್ಲ. ಇದಕ್ಕೆ ಬದಲಾಗಿ ಅವರು ಕೊಡುವ ಸಮರ್ಥನೆಯೆಂದರೆ ಅಪ್ರಾಪ್ತರು ಲೈಂಗಿಕ ಕೆಲಸದಲ್ಲಿ ತೊಡಗಿದ್ದಾರೆ ಎಂಬುದು. ಸಂಶೋಧನೆಯಿಂದ ಕಂಡುಬಂದ ಅಂಶವೆಂದರೆ ದಾಳಿಯ ವೇಳೆಯಲ್ಲಿ ತೀರಾ ಕಡಿಮೆ ಶೇಕಡಾವಾರು ಪ್ರಮಾಣದಲ್ಲಿ ಅಪ್ರಾಪ್ತರು ಸಿಕ್ಕಿದ್ದಾರೆ ಎಂಬುದು. ಜೊತೆಗೆ ದಾಳಿಯಿಂದ ಸೆರೆಹಿಡಿಯಲ್ಪಟ್ಟು ಸುರಕ್ಷಿತ ಗೃಹಗಳಿಗೆ ಕಳುಹಿಸಲಾದ ಬಹುತೇಕ ಲೈಂಗಿಕ ಕೆಲಸಗಾರರು ಬಿಡುಗಡೆಯಾದ ಮೇಲೆ ಪುನಃ ಲೈಂಗಿಕ ಕೆಲಸಕ್ಕೆ ಹಿಂದಿರುಗಿದ್ದಾರೆ. ಹೀಗೆ ಹಿಂದಿರುಗಿದವರ ಪೈಕಿ ಈ ಹಿಂದೆ ಮಾನವ ಕಳ್ಳಸಾಗಾಣಿಕೆಯ ಮೂಲಕ ಲೈಂಗಿಕ ಕೆಲಸಕ್ಕೆ ಸೇರಿದವರೂ ಹಾಗೆಯೇ ತಮ್ಮ ಸ್ವ ಇಚ್ಛೆಯಿಂದಲೇ ಈ ಕೆಲಸಕ್ಕೆ ಬಂದವರು ಇಬ್ಬರೂ ಇದ್ದಾರೆ. ದಾಳಿ ನಂತರ ಸಂರಕ್ಷಿಸಲ್ಪಟ್ಟವರು ಪ್ರಯಾಸದಿಂದ ತಾವಾಗೇ, ನಾವು ಲೈಂಗಿಕ ಕೆಲಸ ಬಿಟ್ಟುಬಿಡುತ್ತೇವೆ ಎಂದು ಪ್ರಮಾಣ ಮಾಡಿಸಿಕೊಂಡಿದ್ದಾಗ್ಯೂ ಸಹ, ಪುನಃ ಲೈಂಗಿಕ ಕೆಲಸಕ್ಕೆ ಹಿಂದಿರುಗಿದ್ದಾರೆ.

ಈ ಅಧ್ಯಯನದಿಂದ ಕಂಡುಬಂದ ಸಂಗತಿಯೆಂದರೆ ಪಾರುಗಾಣಿಸುವ ಕಾರ್ಯವಿಧಾನಗಳೆಲ್ಲವೂ ದಾಳಿಗೊಳಗಾದವರ ವಿಷಯದಲ್ಲಿ ತಾರತಮ್ಯದಿಂದ, ಹಿಂಸಾಚಾರದಿಂದ, ವಿಧ್ವಂಸಕತೆಯಿಂದ ಕೂಡಿದೆಯಲ್ಲದೆ ಲೈಂಗಿಕ ದುಡಿಮೆಯಲ್ಲಿ ತೊಡಗಿಸಿಕೊಂಡ ಅಪ್ರಾಪ್ತರ ಹಾಗೆಯೇ ಬಲವಂತದಿಂದ ಈ ದುಡಿಮೆಗೆ ದೂಡಲ್ಪಟ್ಟ ಪ್ರಾಪ್ತವಯಸ್ಕರ ಸಮಸ್ಯೆಗಳನ್ನು ಪರಿಹರಿಸುವಲ್ಲೂ ಸೋತಿದೆ ಎಂಬುದು ಸಾಬೀತಾಗಿದೆ. ತಲೆತಲೆಮಾರುಗಳಿಂದ ಪೊಲೀಸರು ದಾಳಿ ಮಾಡಿಕೊಂಡು ಬಂದಿದ್ದರೂ ಸಹ ಮಾನವ ಕಳ್ಳಸಾಗಾಣಿಕೆಯ ವಿರುದ್ಧದ ಯುದ್ಧದಲ್ಲಿ ಅವರು ಜಯಶಾಲಿಗಳಾಗಿಲ್ಲ.

ಈ ಗಾಢಾಂಧಕಾರದಿಂದ ಕೂಡಿದ ಸುರಂಗಮಾರ್ಗದಿಂದ ಹೊರಬರುವ ದಾರಿ ಕಾಣಿಸುವ ಬೆಳಕೆಂದರೆ ತಮ್ಮ ಬದುಕನ್ನು ಆವರಿಸಿರುವ ಹಿಂಸೆ ಮತ್ತು ಅವಮಾನಗಳನ್ನು ಮತ್ತು ಅಪ್ರಾಪ್ತರನ್ನು ಹಾಗೂ ಮಾನವ ಕಳ್ಳಸಾಗಣೆಗೆ ಒಳಗಾದ ಮಹಿಳೆಯರನ್ನು ಲೈಂಗಿಕ ಕೆಲಸದಲ್ಲಿ ದೂಡುತ್ತಿರುವ ವ್ಯವಸ್ಥೆಯನ್ನು ಮೆಟ್ಟಿ ನಿಲ್ಲಬಲ್ಲ ಜಾಗೃತರಾದ ಲೈಂಗಿಕ ಕೆಲಸಗಾರರ ಸಂಘಟಿತ ಪ್ರಯತ್ನಗಳು. ಯಾವುದೇ ಸಮುದಾಯ ಹೊರಗಿನ ಶಕ್ತಿಗಳು ಪೊಲೀಸ್ ಬಲದಿಂದ ಸಂರಕ್ಷಣೆ ನೀಡಬಹುದು ಎಂದು ಯೋಚಿಸಿದರೆ ಸಮಸ್ಯೆ ಇನ್ನೂ ಉಲ್ಬಣಿಸುತ್ತದೆ. ಸಂರಕ್ಷಣೆಯ ಬದಲಾಗಿ ಹಿಂಸಾಚಾರವೇ ಹೆಚ್ಚಾಗುತ್ತದೆ.

ಒಂದು ನಿರ್ದಿಷ್ಟ ವೇಶ್ಯಾಗೃಹದ ಅಥವಾ ಸಮುದಾಯದ ಲೈಂಗಿಕ ಕೆಲಸಗಾರರ ಪಾಲ್ಗೊಳ್ಳುವಿಕೆ ಇರದೆ ದಾಳಿ ಹಾಗೂ ಸಂರಕ್ಷಣಾ ಕಾರ್ಯತಂತ್ರಗಳು ಫಲಪ್ರದವಾಗುವುದಿಲ್ಲ. ಬಲವಂತವಾಗಿ ಲೈಂಗಿಕ ಕೆಲಸಕ್ಕೆ ದೂಡಿದ

ಮಹಿಳೆಯರಿಗೆ ಯಾವುದೇ ಸಂರಕ್ಷಣೆ ನೀಡಲು ಅಂತಹ ಕಾರ್ಯತಂತ್ರಗಳಿಗೆ ಸಾಧ್ಯವಾಗುವುದಿಲ್ಲ. ಇದರಿಂದ ತಿಳಿಯುವುದೇನೆಂದರೆ ಈ ಒಟ್ಟು ಚರ್ಚೆಯ ಕೇಂದ್ರವಾಗಿರುವ ಮಹಿಳೆ ಮುಖ್ಯವಾಗಿ ಧ್ವನಿ ಎತ್ತಬೇಕಾಗಿದೆ.

ಈ ಸಂಶೋಧನೆಯು ಭಾರತದ ಮಾನವ ಹಕ್ಕು ಹೋರಾಟಗಾರರು, ಮಾನವ ಹಕ್ಕು ಸಂಶೋಧನಾ ಏಜೆನ್ಸಿಗಳು ಹಾಗೂ ಲೈಂಗಿಕ ಕಾರ್ಯಕರ್ತರ ಪಾಲುದಾರಿಕೆಯಿಂದ ರೂಪುಗೊಂಡುದಾಗಿದೆ. ಈ ಸಂಶೋಧನೆಯನ್ನು ವೇಶ್ಯಾ ಅನ್ಯಾಯ ಮುಕ್ತಿ ಪರಿಷತ್ (ವಿಎಎಂಪಿ), ಸಂಗ್ರಾಮ್ ಎಂಬ ಹೆಸರಿನ ಎನ್‌ಜಿಓ ಹಾಗೂ ನೆದರ್‌ಲ್ಯಾಂಡ್‌ನ ರೈಟ್ಸ್ ಫಾರ್ ಚೇಂಜ್ ಎಂಬ ಸಂಸ್ಥೆಗಳು ಸಾಮೂಹಿಕವಾಗಿ ನಡೆಸಿವೆ. ವೇಶ್ಯಾ ಅನ್ಯಾಯ ಮುಕ್ತಿ ಪರಿಷತ್, ಸಹೇಲಿ ಎಚ್‌ಐವಿ/ಏಡ್ಸ್ ಕಾರ್ಯಕರ್ತ ಸಂಘ ಹಾಗೂ ಮಹಾರಾಷ್ಟ್ರದ ಆಧಾರ ಬಹೂದ್ದೇಶೀಯ ಸಂಸ್ಥೆ, ಉತ್ತರ ಕರ್ನಾಟಕದ ಮಹಿಳಾ ಒಕ್ಕೂಟ, ಕೇರಳದ ಕೇರಳಾ ನೆಟ್‌ವರ್ಕ್ ಆಫ್ ಸೆಕ್ಸ್ ವರ್ಕರ್ಸ್ ಹಾಗೂ ಜಾರ್ಖಂಡ್‌ನ ಸೃಜನ್ ಫೌಂಡೇಷನ್‌ಗಳು ಅಧ್ಯಯನದ ಪಾಲುದಾರರುಗಳಾಗಿದ್ದಾರೆ.

ಈ ಕೆಲವು ಗಂಭೀರ ಪ್ರಶ್ನೆಗಳಿಗೆ ಉತ್ತರಿಸಲು ಪುರಾವೆಗಳನ್ನು ಸಂಗ್ರಹಿಸಲು ಅಧ್ಯಯನ ಕೈಗೊಳ್ಳಲಾಯಿತು. ಆ ಪ್ರಶ್ನೆಗಳೆಂದರೆ: ಮಹಿಳೆಯರು ಲೈಂಗಿಕ ಕೆಲಸಕ್ಕೆ ಬಲವಂತವಾಗಿ ಪ್ರವೇಶಿಸಿದ್ದರೆ ಅವರು ಸ್ವಯಂ ಇಚ್ಛೆಯಿಂದ ಲೈಂಗಿಕ ಕೆಲಸಕ್ಕೆ ಮರಳಲು ಏಕೆ ಬಯಸುತ್ತಾರೆ?
ಇತರ ಉದ್ಯೋಗಗಳನ್ನು ಮಾಡಲು ಕೌಶಲ್ಯ ಕೊರತೆಯಿಂದಾಗಿ ಅವರು ಪ್ರವೇಶಿಸಿದ್ದರೆ, ಅವರು ಗಳಿಸಿದ ಕೌಶಲ್ಯಗಳನ್ನು ಕಲಿತ ನಂತರ ಅವರು ಏಕೆ ಲೈಂಗಿಕ ಕೆಲಸಕ್ಕೆ ಹಿಂದಿರುಗುತ್ತಾರೆ?
'ಸನ್ನಿವೇಶದ ಒತ್ತಾಯದಿಂದ' ಅವರು ಲೈಂಗಿಕ ಕೆಲಸಕ್ಕೆ ಪ್ರವೇಶಿಸಿದ್ದರೆ, ಪರಿಸ್ಥಿತಿಗಳು ಉತ್ತಮ ಸ್ಥಿತಿಯಲ್ಲಿ ಬದಲಾಗುತ್ತಿರುವಾಗ ಅವರು ಏಕೆ ಲೈಂಗಿಕ ಕೆಲಸಕ್ಕೆ ಹಿಂದಿರುಗುತ್ತಾರೆ?
ಮೋಸದ ಕಾರಣದಿಂದ, ಪ್ರಲೋಭನೆಯಿಂದ ಅಥವಾ ವಿಶ್ವಾಸಾರ್ಹರಲ್ಲದ ವ್ಯಕ್ತಿಗಳ ಕಾರಣದಿಂದ ಅವರು ಲೈಂಗಿಕ ಕೆಲಸಕ್ಕೆ ಪ್ರವೇಶಿಸಿದ್ದರೆ, "ಹೊಸ" ಜೀವನವನ್ನು ಮಾಡಲು ಅವಕಾಶವನ್ನು ನೀಡಿದಾಗ ಅವರು ಏಕೆ ಲೈಂಗಿಕ ಕೆಲಸಕ್ಕೆ ಹಿಂದಿರುಗುತ್ತಾರೆ?
ಜೀವನ ಆಯ್ಕೆಗಳ ಕೊರತೆಯಿಂದಾಗಿ ಅವರು ಪ್ರವೇಶಿಸಿದರೆ, ಅವರು ಮರಳಲು 'ಆಯ್ಕೆ' ಯಾಕೆ ಮಾಡಿಕೊಳ್ಳುತ್ತಾರೆ?